# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2410 |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | 22-03-2022 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಎಷ್ಟು ಮಕ್ಕಳ ಸಹಾಯವಾಣಿ ಕೇಂದ್ರಗಳಿವೆ; ಅವು ಯಾವ ವರ್ಷದಲ್ಲಿ ಪ್ರಾರಂಭವಾಗಿವೆ; ಅವುಗಳು ಯಾವ ಹಂತದಲ್ಲಿವೆ;</td><td>ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಯಲ್ಲಿ 05 ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಮಕ್ಕಳ ಸಹಾಯವಾಣಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಂಸ್ಥೆಯು ಪ್ರಾರಂಭಗೊಂಡ ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.</td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ಸಹಾಯವಾಣಿ ಕೇಂದ್ರಗಳಿಂದ ಎಷ್ಟು ಮಕ್ಕಳಿಗೆ ಸಹಾಯ/ಪುನರ್ವಸತಿ ನೀಡಲಾಗಿದೆ: (ಸಂಸ್ಥೆವಾರು, ಮಕ್ಕಳವಾರು ವಿವರ ನೀಡುವುದು)</td><td>ಕಳೆದ 05 ವರ್ಷಗಳಲ್ಲಿ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ ಕೇಂದ್ರದಿಂದ ಸಹಾಯ/ಪುನರ್ವಸತಿ ಒದಗಿಸಿರುವ ಮಕ್ಕಳ ಸಂಖ್ಯೆಗಳ ವಿವರ ಈ ಕೆಳಕಂಡತಿರುತ್ತದೆ.<br><table><tr><th>ಜಿಲ್ಲೆ</th><th>ಸಹಾಯ/ಪುನರ್ವಸತಿ ಒದಗಿಸಿರುವ ಮಕ್ಕಳ ಸಂಖ್ಯೆ</th></tr><tr><td>ಬೀದರ್</td><td>4732</td></tr><tr><td>ಕಲ್ಬುರ್ಗಿ</td><td>4434</td></tr></table><br>ಮಕ್ಕಳ ಸಹಾಯವಾಣಿಗೆ ಸ್ವೀಕೃತವಾಗುವ ಕರೆಗಳ ಅಗತ್ಯತೆಗೆ ಅನುಗುಣವಾಗಿ ಮಕ್ಕಳ ಸಹಾಯವಾಣಿ ಕೇಂದ್ರದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆಪ್ತ ಸಮಾಲೋಚನೆ, ಮಾರ್ಗದರ್ಶನ, ಸಹಾಯ ಹಾಗೂ ಪುರ್ನವಸತಿ ಒದಗಿಸಿರುವ ಕುರಿತಂತೆ ಸಂಸ್ಥೆವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>ಮಕ್ಕಳ ಪ್ರಕರಣಗಳ ಗೌಪ್ಯತೆಯನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಕಲಂ 74ರನ್ವಯ ನಿರ್ವಹಿಸಬೇಕಾಗಿರುವುದರಿಂದ, ಸಂಸ್ಥೆವಾರು ಮಕ್ಕಳಿಗೆ ಒದಗಿಸಿರುವ ಮಕ್ಕಳ ಸಂಖ್ಯೆಯನ್ನು ಒದಗಿಸಲಾಗಿದೆ.</td></tr>
<tr><td>ಇ)</td><td>ಕಳೆದ 5 ವರ್ಷಗಳಿಂದ ಸಹಾಯವಾಣಿ ಕೇಂದ್ರಗಳನ್ನು ನಡೆಸಲು ಸರ್ಕಾರ ಪ್ರತಿ ವರ್ಷ ಪ್ರತಿ ಕೇಂದ್ರಕ್ಕೆ ಕೇಂದ್ರ/ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ ಎಷ್ಟು;</td><td>ಮಕ್ಕಳ ಸಹಾಯವಾಣಿ ಕೇಂದ್ರದ ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಮಾತ್ರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕಳೆದ 05 ವರ್ಷಗಳಲ್ಲಿ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಯ ಮಕ್ಕಳ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗಾಗಿ ಒಟ್ಟು ರೂ.363.06 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕೇಂದ್ರವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ.</td></tr>
</table>

| | | |
|---|---|---|
| ಈ) | ಸಹಾಯವಾಣಿ ಕೇಂದ್ರಗಳು ಕಾರ್ಯ ನಿರ್ವಹಿಸಬೇಕಾದಲ್ಲಿ ಕನಿಷ್ಠ ಪ್ರತಿ ತಿಂಗಳು/ವರ್ಷಗಳ ನಿಯಮದಂತೆ ಮಾಡುವ ಕೆಲಸಗಳಾವುವು; ಇವುಗಳಿಗೆ ನೋಡಲ್ ಅಧಿಕಾರಿ ಯಾರು? | ಮಕ್ಕಳ ಉಚಿತ ಸಹಾಯವಾಣಿ ಕೇಂದ್ರವು ದಿನದ 24x7 ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ನೆರವಿಗಾಗಿ ಕಾರ್ಯನಿರ್ವಹಿಸುತ್ತಿದೆ.<br>**ಮಕ್ಕಳ ಸಹಾಯವಾಣಿ ಕೇಂದ್ರಗಳು ಪ್ರತಿ ಮಾಹೆ ನಿರ್ವಹಿಸಬೇಕಾದ ಕಾರ್ಯಗಳು:**<br>1. ಪ್ರತಿನಿತ್ಯ ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆಗೆ ಸ್ವೀಕೃತವಾಗುವ ಕರೆಗಳ ವಿಷಯವನ್ನು ಆಧರಿಸಿ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿಯನ್ನು ನೀಡುವುದು.<br>2. ಪ್ರತಿನಿತ್ಯ ಸ್ವೀಕೃತವಾಗುವ ಕರೆಗಳ ಕುರಿತು ಸಂಬಂಧಿಸಿದ ಇಲಾಖೆಗಳಿಂದ ಅಗತ್ಯಕ್ರಮ ವಹಿಸಿರುವ ಬಗ್ಗೆ ಅನುಸರಣೆ.<br>3. ಪ್ರತಿ ಮಾಹೆ ಮಕ್ಕಳ ಸಹಾಯವಾಣಿ ಕರೆಗಳನ್ನು ಉಪಯೋಗಿಸುವ ಮಕ್ಕಳೊಂದಿಗೆ ಸಭೆಯನ್ನು ಹಮ್ಮಿಕೊಳ್ಳುವುದು.<br>4. ವಿವಿಧ ಇಲಾಖೆಯಿಂದ ಹಮ್ಮಿಕೊಳ್ಳಲಾಗುವ ಸಭೆಗಳಲ್ಲಿ ಭಾಗವಹಿಸುವುದು ಹಾಗೂ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡುವ ಮೂಲಕ ಪಡೆಯಬಹುದಾದ ಸೌಲಭ್ಯಗಳ ಕುರಿತು ಇಲಾಖಾ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು.<br>5. ಜಿಲ್ಲೆಗಳ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳನ್ನು ಸಂಘಟಿಸಿ, ಈ ಗುಂಪುಗಳ ಮೂಲಕ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು.<br>6. ಮಕ್ಕಳ ಕಲ್ಯಾಣ ಸಮಿತಿಯಿಂದ ಮಕ್ಕಳ ಪ್ರಕರಣಗಳ ಕುರಿತು ಮಕ್ಕಳ ಸಹಾಯವಾಣಿ ಘಟಕದಿಂದ ಅನುಸರಣೆಯೆಂದು ಹೊರಡಿಸಲಾಗುವ ಆದೇಶದನ್ವಯ ಅನುಸರಣೆಯನ್ನು ನಿರ್ವಹಿಸಲಾಗುತ್ತಿದೆ.<br>**ಮಕ್ಕಳ ಸಹಾಯವಾಣಿ ಕೇಂದ್ರಗಳು ವಾರ್ಷಿಕವಾಗಿ ನಿರ್ವಹಿಸಬೇಕಾದ ಕಾರ್ಯಗಳು:**<br>1. ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸಮಾಜ ಕಲ್ಯಾಣ ಇಲಾಖೆಗಳಿಂದ ಭಿಕ್ಷಾಟನೆಗೆ ಒಳಪಟ್ಟ, ಬಾಲಕಾರ್ಮಿಕತೆಗೆ ಒಳಗಾದ, ಬಾಲ್ಯ ವಿವಾಹ ಹಾಗೂ ಇನ್ನಿತರೆ ಸನ್ನಿವೇಶಗಳಲ್ಲಿ ಕೈಗೊಳ್ಳಲಾಗುವ ರೆಸ್ಕ್ಯೂ ಆಪರೇಷನ್‌ಗಳಲ್ಲಿ ಭಾಗವಹಿಸಿ ಅಗತ್ಯ ಸೇವೆಯನ್ನು ಒದಗಿಸುವುದು.<br>2. ಜಿಲ್ಲೆಗಳಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ದೊರೆಯುವ ಸೌಲಭ್ಯಗಳ ಕುರಿತು ಡೈರಕ್ಟರಿಯನ್ನು ಸಿದ್ಧಪಡಿಸುವುದು ಹಾಗೂ ನಿಯಮಿತವಾಗಿ ನವೀಕರಿಸುವುದು.<br>3. ಇಲಾಖಾ ಅಧಿಕಾರಿಗಳು ಹಾಗೂ ಮಕ್ಕಳ ಸಹಾಯವಾಣಿ ಸಿಬ್ಬಂದಿ ಮತ್ತು ಸ್ವಯಂ ಸೇವಕರಿಗೆ ಮಕ್ಕಳ ಸಹಾಯವಾಣಿಯಿಂದ ದೊರೆಯುವ ಸೌಲಭ್ಯಗಳು ಮತ್ತು ಮಕ್ಕಳ ಹಕ್ಕುಗಳು ಹಾಗೂ ಸರ್ಕಾರದ ವಿವಿಧ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ತರಬೇತಿ ಹಾಗೂ ಪುನಃಶ್ಚೇತನ ತರಬೇತಿಗಳನ್ನು ಹಮ್ಮಿಕೊಳ್ಳುವುದು.<br>4. ಮಕ್ಕಳ ಸಹಾಯವಾಣಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ನಿರ್ವಹಣೆ ಆಡಿಟ್ ವರದಿ ತಯಾರಿಕೆ. |

| | | |
|---|---|---|
| | | **ಮಕ್ಕಳ ಸಹಾಯವಾಣಿಗೆ ಗುರುತಿಸಿರುವ ನೋಡಲ್ ಅಧಿಕಾರಿಗಳ ವಿವರ:**<br>1. ಬೀದರ್‌ಜಿಲ್ಲೆ: ಡಾನ್ ಬಾಸ್ಕೋ ಯೂತ್ ಎಂಪವರ್‌ಮೆಂಟ್ ಸರ್ವಿಸ್ ಸಂಸ್ಥೆಯ ಶ್ರೀ ನೆಲ್ಸನ್ ಇವರನ್ನು ಹಾಗೂ<br>2. ಕಲ್ಬುರ್ಗಿ ಜಿಲ್ಲೆ: ಎಸ್‌ಎಸ್ ಲಾ ಕಾಲೇಜ್‌ನ ಶ್ರೀ.ಟಿ ಬಸವರಾಜ್ ಎಂಬುವರನ್ನು ನೋಡಲ್ ಅಧಿಕಾರಿಯನ್ನಾಗಿ ಗುರುತಿಸಲಾಗಿರುತ್ತದೆ. |

ಸಂಖ್ಯೆ:ಮಮಇ 41 ಮಭಾಬ 2022

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತುಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

## ಅನುಬಂಧ–1

**ಬೀದರ್ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳನ್ನು ಪ್ರಾರಂಭಗೊಳಿಸಿದ ವಿವರ.**

| ಕ್ರಮ.ಸಂಖ್ಯೆ | ಜಿಲ್ಲೆ | ಉಪ ಘಟಕಗಳ ವಿವರ | ಪ್ರಾರಂಭಿಸಿದ ದಿನಾಂಕ | ಪ್ರಸ್ತುತ ಹಂತ |
|---|---|---|---|---|
| 01 | ಬೀದರ್ | ಡಾನ್ ಬಾಸ್ಕೋ ಯೂತ್ಎಂಪವರ್‌ಮೆಂಟ್ ಸರ್ವೀಸ್ | 28.10.2010 | ಎಲ್ಲಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. |
| 02 | ಬೀದರ್ | ಸಹಯೋಗ್ | 28.10.2010 | |
| 03 | ಬೀದರ್ | ಡಾ. ಬಿ.ಆರ್‌ಅಂಬೇಡ್ಕರ್‌ಕಲ್ಚರಲ್‌ಅನದ ವೆಲ್‌ಫೇರ್ ಸೊಸೈಟಿ | 28.10.2010. | |
| 04 | ಬೀದರ್ | ಆರ್‌ಗನೈಜೆಷನ್ ಫಾರ್ ಬೀದರ್‌ಇಂಟಿಗ್ರಲ್‌ಇನ್‌ಫಾರ್‌ವೇಷನ್(ಆರ್‌ಬಿಟ್) | 28.10.2010. | |
| 05 | ಬೀದರ್ | ಕಾರ್ಮೆಲ್ ಸೇವಾ ಟ್ರಸ್ಟ್ | 28.10.2010. | |
| 06 | ಕಲಬುರಗಿ | ಎಸ್ಎಸ್ ಲಾ ಕಾಲೇಜ್(ಸೇಟ್ ಶಂಕರ್‌ಲಾಲ್ ಲಾಹೋತಿಕಾಲೇಜ್) | 01.03.2009. | |
| 07 | ಕಲಬುರಗಿ | ಡಾನ್ ಬಾಸ್ಕೋ ಪ್ಯಾರ್ | 01.03.2009. | |
| 08 | ಕಲಬುರಗಿ | ಮಾರ್ಗದರ್ಶಿ ಸೊಸೈಟಿ | 01.03.2009. | |
| 09 | ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್) | ಮಾರ್ಗದರ್ಶಿ ಸೊಸೈಟಿ | 01.05.2018. | |
| 10. | ಕಲಬುರಗಿ(ವಾಡಿಜಂಕ್ಷನ್‌ರೈಲ್ವೆ ಸ್ಟೇಷನ್) | ಹೈದ್ರಾಬಾದ್‌ಕರ್ನಾಟಕಎಜುಕೇಷನ್ ಸೊಸೈಟಿ | 01.10.2019. | |

## ಅನುಬಂಧ–2

**ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳಿಂದ ಮಕ್ಕಳಿಗೆ ಸಹಾಯ/ಪುರ್ನವಸತಿ ಒದಗಿಸಿರುವ ಮಕ್ಕಳ ಸಂಖ್ಯೆ**

| ಕ್ರ.ಸಂ | ಜಿಲ್ಲೆ | ಉಪ ಘಟಕಗಳ ವಿವರ | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|---|
| 01 | ಬೀದರ್ | ಡಾನ್ ಬಾಸ್ಕೋ ಯೂತ್‌ಎಂಪವರ್‌ಮೆಂಟ್ ಸರ್ವೀಸ್ | 576 | 873 | 985 | 782 | 750 |
| 02 | ಬೀದರ್ | ಸಹಯೋಗ್ | 24 | 31 | 41 | 86 | 8 |
| 03 | ಬೀದರ್ | ಡಾ. ಬಿ.ಆರ್‌ಅಂಬೇಡ್ಕರ್‌ಕಲ್ಚರಲ್‌ಅನದ ವೆಲ್‌ಫೇರ್ ಸೊಸೈಟಿ | 32 | 4 | 9 | 43 | 1 |
| 04 | ಬೀದರ್ | ಆರ್‌ಗನೈಜೆಷನ್ ಫಾರ್ ಬೀದರ್‌ಇಂಟಿಗ್ರಲ್‌ಇನ್‌ಫಾರ್‌ವೇಷನ್(ಆರ್‌ಬಿಟ್) | 54 | 18 | 17 | 2 | 23 |
| 05 | ಬೀದರ್ | ಕಾರ್ಮೆಲ್ ಸೇವಾ ಟ್ರಸ್ಟ್ | 0 | 0 | 144 | 134 | 95 |
| 06 | ಕಲಬುರಗಿ | ಎಸ್ ಎಸ್ ಲಾ ಕಾಲೇಜ್(ಸೇಟ್ ಶಂಕರ್‌ಲಾಲ್ ಲಾಹೋತಿಕಾಲೇಜ್) | ನೋಡಲ್ ಸಂಸ್ಥೆಯಾಗಿರುವುದರಿಂದ ನೇರವಾಗಿ ಮಕ್ಕಳ ಕರೆಗಳನ್ನು ಸ್ವೀಕರಿಸುವುದಿಲ್ಲ | | | | |
| | ಒಟ್ಟು | | 686 | 926 | 1196 | 1047 | 877 |
| 07 | ಕಲಬುರಗಿ | ಡಾನ್ ಬಾಸ್ಕೋ ಪ್ಯಾರ್ | 724 | 776 | 938 | 622 | 595 |
| 08 | ಕಲಬುರಗಿ | ಮಾರ್ಗದರ್ಶಿ ಸೊಸೈಟಿ | 72 | 55 | 17 | 14 | 29 |
| 09 | ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್) | ಮಾರ್ಗದರ್ಶಿ ಸೊಸೈಟಿ | 0 | 211 | 173 | 20 | 45 |
| 10. | ಕಲಬುರಗಿ(ವಾಡಿ ಜಂಕ್ಷನ್‌ರೈಲ್ವೆ ಸ್ಟೇಷನ್) | ಹೈದ್ರಾಬಾದ್‌ಕರ್ನಾಟಕ ಎಜುಕೇಷನ್ ಸೊಸೈಟಿ | 0 | 1 | 37 | 16 | 89 |
| | ಒಟ್ಟು | | 796 | 1043 | 1165 | 672 | 758 |

## ಅನುಬಂಧ-3

**ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳಿಗೆ ಬಿಡುಗಡೆ ಮಾಡಿರುವ ವಾರ್ಷಿಕಅನುದಾನದ ವಿವರ**

| ಕ್ರಸಂ | ಜಿಲ್ಲೆ | ಉಪ ಘಟಕಗಳ ವಿವರ | ಅನುದಾನ ಬಿಡುಗಡೆಯಾದ ವಿವರ(ರೂ ಲಕ್ಷಗಳಲ್ಲಿ) | | | | |
|---|---|---|---|---|---|---|---|
| | | | **2016 –17** | **2017 –18** | **2018 –19** | **2019 –20** | **2020 –21** |
| 01 | ಬೀದರ್ | ಡಾನ್ ಬಾಸ್ಕೋ ಯೂತ್ಎಂಪವರ್ಮೆಂಟ್ ಸರ್ವೀಸ್ | 10.68 | 12.44 | 12.40 | 13.31 | 14.94 |
| 02 | ಬೀದರ್ | ಸಹಯೋಗ್ | 05.45 | 05.36 | 05.41 | 05.54 | 05.71 |
| 03 | ಬೀದರ್ | ಡಾ. ಬಿ.ಆರ್ಅಂಬೇಡ್ಕರ್ಕಲ್ಚರಲ್ಅನದ ವೆಲ್ಫೇರ್ ಸೊಸೈಟಿ | 05.49 | 05.34 | 05.38 | 05.47 | 05.60 |
| 04 | ಬೀದರ್ | ಆರ್ಗನೈಜೆಷನ್ ಫಾರ್ ಬೀದರ್ಇಂಟಿಗ್ರಲ್ಇನ್ಫಾರ್ವೆಽೇಷನ್(ಆರ್ಬಿಟ್) | 05.22 | 05.45 | 5.23 | 05.57 | 05.74 |
| 05 | ಬೀದರ್ | ಕಾರ್ಮೆಲ್ ಸೇವಾ ಟ್ರಸ್ಟ್ | 0 | 0 | 2.60 | 16.24 | 13.65 |
| 06 | ಕಲಬುರಗಿ | ಎಸ್ಎಸ್ ಲಾ ಕಾಲೇಜ್(ಸೇಟ್ ಶಂಕರ್ಲಾಲ್ ಲಾಹೋತಿಕಾಲೇಜ್) | 03.67 | 03.51 | 3.36 | 04.03 | 04.60 |
| 07 | ಕಲಬುರಗಿ | ಡಾನ್ ಬಾಸ್ಕೋ ಪ್ಯಾರ್ | 13.77 | 14.30 | 14.36 | 14.30 | 14.34 |
| 08 | ಕಲಬುರಗಿ | ಮಾರ್ಗದರ್ಶಿ ಸೊಸೈಟಿ | 05.99 | 05.85 | 06.03 | 05.95 | 06.04 |
| 09 | ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್) | ಮಾರ್ಗದರ್ಶಿ ಸೊಸೈಟಿ | 0 | 0 | 16.06 | 13.03 | 12.16 |
| 10. | ಕಲಬುರಗಿ(ವಾಡಿ ಜಂಕ್ಷನ್ರೈಲ್ವೆ ಸ್ಟೇಷನ್) | ಹೈದ್ರಾಬಾದ್ಕರ್ನಾಟಕಎಜುಕೇಷನ್ ಸೊಸೈಟಿ | 0 | 0 | 0 | 9.08 | 14.95 |
| | | | 50.27 | 52.25 | 70.83 | 92.52 | 97.73 |